# ಆಹಾ ಸುದ್ದಿ!

★ ಸಸಿತೋಟ



ಸಿಂಗಲ್ ಸ್ಟಾರ್‌ನಿಂದ ಫೈವ್ ಸ್ಟಾರ್‌ವರೆಗಿನ ಹೋಟೆಲ್ ಹೆಸರು ಕೇಳಿರಬಹುದು. ಆದರೆ ಸ್ವಿಟ್ಜರ್ಲೆಂಡ್‌ನಲ್ಲಿರುವ ಇದು ಝೀರೊ ಸ್ಟಾರ್ ಹೋಟೆಲ್. ಆಲ್ಪ್ಸ್ ಪರ್ವತದ ಹಿನ್ನೆಲೆಯಲ್ಲಿ 1200 ಮೀಟರ್ ಎತ್ತರದಲ್ಲಿರುವ ಈ ಹೋಟೆಲ್ ಕೊಠಡಿಗೆ ಗೋಡೆ, ಮೇಲ್ಛಾವಣಿ ಯಾವುದೂ ಇಲ್ಲ. ಕಲಾವಿದನ ಕಲ್ಪನೆಯೇನೋ ಸಾಕಾರವಾಗಿದೆ; ಆದರೆ ಮಧುಚಂದ್ರಕ್ಕೆಂದು ಬಂದ ಜೋಡಿ ಪರಸ್ಪರರನ್ನು ನೋಡುವುದು ಬಿಟ್ಟು ಸುತ್ತಮುತ್ತ ಇಣುಕಿ ಹಾಕುವವರನ್ನು ಹುಡುಕುತ್ತ ಕೂರಬೇಕಷ್ಟೆ.



ಮದುವೆ ದಿನ ಭರ್ಜರಿ ಲೆಹಂಗಾ ಅಥವಾ ಸೀರೆಯೊಂದಿಗೆ ಭರ್ಜರಿ ಎಂಟ್ರಿ ಕೊಡುವುದು ಪ್ರತಿಯೊಬ್ಬ ವಧುವಿನ ಕನಸು. ಆದರೆ ಈ ಪಂಜಾಬಿ ವಧು ರಂಗುರಂಗಿನ ಚೋಲಿ, ದುಪಟ್ಟಾ, ಚಿನ್ನದ ಒಡವೆ ಧರಿಸಿದರೂ ಕೆಳಭಾಗ ಮಾತ್ರ ಬಡವಾಗಿದೆ. ಲೆಹಂಗಾ ಬದಲು ನೈಕಿ ಚಡ್ಡಿ ತೊಟ್ಟು ವರನ ಕೈ ಹಿಡಿದು ನಿಂತಿದ್ದಾಳೆ. ಇದು ಸ್ವಾತಂತ್ರ್ಯದ ಸಂಕೇತವಂತೆ. ಎಲ್ಲರ ಮದುವೆ ಫೋಟೋದಂತೆ ಈ 'ಸ್ವಾತಂತ್ರ್ಯ' ಸಾಕಷ್ಟು ಗಮನ ಸೆಳೆದಿದೆ.



ಚೀನಾದ ಈ ಚೆಲುವೆಯ ಅಂಗೈಯಲ್ಲಿರುವ ಹಕ್ಕಿ ಗೂಡು ಸೂಪಾಗಿ ಹೊಟ್ಟೆ ಸೇರುವಂಥದ್ದು; ನೂರಾರು ಡಾಲರ್‌ಗೆ ಕನ್ನ ಹಾಕುವಂಥದ್ದು. ಪುಟ್ಟ ಹಕ್ಕಿ ಕಟ್ಟುವ ಇಂತಹ ಗೂಡುಗಳನ್ನು ಒಣಗಿಸಿ ಉಪಾಹಾರಗೃಹಗಳಿಗೆ ಮಾರುವ ದಂಧೆ ಮ್ಯನ್ಮಾರ್, ಚೀನಾದಲ್ಲಿ ಜೋರಾಗಿದೆಯಂತೆ. ಹಕ್ಕಿ, ಹಕ್ಕಿಯ ಮೊಟ್ಟೆಗಳು ಹೊಟ್ಟೆ ಸೇರಿಯಾಯ್ತು, ಈಗ ಗೂಡಿಗೆ ಕೈ ಇಕ್ಕಿದ್ದಾರೆ ಮಾನವರು.

ಅಮೆರಿಕದ ಮಿಯಾಮಿ ಮೂಲದ ವಸ್ತ್ರ ವಿನ್ಯಾಸಕಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಅತ್ಯಂತ ಹಾಟ್ ದಿರಿಸನ್ನು ಕಂಡು ಹಿಡಿದಿದ್ದಾಳಂತೆ. ಕಪ್ಪು ಗಮ್ ಟೇಪ್ ಅನ್ನು ಎಲ್ಲಿ ಮಾನ ಮುಚ್ಚಬೇಕೋ ಅಲ್ಲಷ್ಟೇ ಸುತ್ತಿಕೊಂಡು ಕ್ಲಬ್‌ಗೆ ಹೋಗಬಹುದಂತೆ. ಈ ಫ್ಯಾಷನ್ ಟ್ರೆಂಡ್ ಇನ್‌ಸ್ಟಾಗ್ರಾಮಿನಲ್ಲಿ 2 ಲಕ್ಷ ಮಂದಿಯನ್ನು ಸೆಳೆದಿದೆಯಂತೆ. ಆದರೆ ಈ ಹಾಟ್ ದಿರಿಸನ್ನು ಕಳಚುವಾಗ ಮಾತ್ರ ನೋವಿನಿಂದ ಮೈಯೆಲ್ಲ ಇನ್ನಷ್ಟು ಹಾಟ್ ಆಗುವುದಂತೂ ಖಚಿತ.

ಚೀನಾದಲ್ಲಿ ಈಗ ಗಾವೊಕಾವೊ ಸಮಯ. ಅಂದರೆ ಈ ಹೆಸರಿನ ರಾಷ್ಟ್ರೀಯ ಕಾಲೇಜು ಅರ್ಹತಾ ಪ್ರವೇಶ ಪರೀಕ್ಷೆ ನಡೆಯುತ್ತದಂತೆ. ವಿದ್ಯಾರ್ಥಿಗಳು ನಕಲು ಮಾಡದಂತೆ ನಿಗಾ ಇಡಲು ಇಂತಹ ಅತ್ಯಾಧುನಿಕ ತಂತ್ರಜ್ಞಾನವನ್ನು ಅಲ್ಲಿಯ ಅಧಿಕಾರಿಗಳು ಬಳಸಿಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಕೆಲವು ಕಡೆ ಇರುವಂತೆ ಹಾಡುತ್ತ, ತಿನ್ನುತ್ತ ಆರಾಮವಾಗಿ ನಕಲು ಮಾಡುವ ಗಾವೊ ಔರ್ ಖಾವೋ ಅಲ್ಲ!



ಸಾಕಿದ ಮುದ್ದು ಪ್ರಾಣಿಯನ್ನು ಉಪವಾಸ ಇಟ್ಟರೆ ಎಷ್ಟು ದುಬಾರಿ ಬೆಲೆ ತೆರಬೇಕಾಗುತ್ತದೆ ಎಂಬುದು ಉತ್ತರಪ್ರದೇಶದ ಹಳ್ಳಿಯೊಂದರ ಸರ್ವೇಶ್‌ಕುಮಾರ್ ಪಾಲ್ ಎಂಬಾತನಿಗೆ ಅನುಭವಕ್ಕೆ ಬಂದಿದೆಯಂತೆ. ಪ್ಯಾಂಟಿನ ಜೇಬಿನಲ್ಲಿ 66 ಸಾವಿರ ರೂಪಾಯಿ ನೋಟಿನ ಕಂತೆಯನ್ನಿಟ್ಟು, ಅದನ್ನು ಹಾಲ್‌ನಲ್ಲೇ ಬಿಟ್ಟು ಸ್ನಾನದ ಮನೆಗೆ ಹೋದ ಸರ್ವೇಶ್. ಹಸಿದ ಆತನ ಆಡು 2000 ಮುಖಬೆಲೆಯ ಈ ನೋಟುಗಳನ್ನು ಚೆನ್ನಾಗಿ ಮೇಯ್ದು ತೇಗಿತಂತೆ. ನೋಟಿನ ಕಂತೆಕಂತೆಯನ್ನು ತಿಂದು ತೇಗುವವರು ಮನುಷ್ಯರು ಮಾತ್ರವೇ ಏಕೆ ಎಂದು ಆಡು ಸೆಡ್ಡು ಹೊಡೆದಿರಬಹುದು.